ಶ್ರೀ ವಿ. ಧನಂಜಯ ಕುಮಾರ್.—ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಯುತ್ತಿರುವ ಮುಷ್ಕರದ ಬಗ್ಗೆ ನಾನು ಒಂದು ಸೂಚನೆಯನ್ನು ಈಗಾಲೇ ತಮಗೆ ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ನಾನು ಸರ್ಕಾರಕ್ಕೆ ಹೇಳಿಕೆ ಕೊಡುವಂತೆ ಒತ್ತಾಯ ಮಾಡಲಾರೆ.

ಶ್ರೀ ಬಿ. ರಾಚಯ್ಯ.—ತಾವು ಅನುಮತಿ ಕೊಟ್ಟರೆ ನಾಳೆಯೇ ಈ ಸಂಬಂಧದಲ್ಲಿ ಹೇಳಿಕೆಯನ್ನು ಕೊಡುತ್ತೇನೆ.

ಶ್ರೀ ಎಸ್. ಸೂರ್ಯನಾರಾಯಣ ರಾವ್.—ನಾನು ಮಿಷಿನರಿ ಮ್ಯಾನುಫಾಕ್ಚರಿಂಗ್ ಕಂಪೆನಿಯ ಬಗ್ಗೆ ನಿಯಮ ೩೩ಳಿರ ಕೆಳಗೆ ಒಂದು ಸೂಚನೆಯನ್ನು ಕಳುಹಿಸಿಕೊಟ್ಟಿದ್ದೇನೆ.

ಅಧ್ಯಕ್ಷರು.—ತಾವು ರೈಸ್ ಮಾಡಿದ್ದೀರಿ. ನಂತರ ತೆಗೆದುಕೊಳ್ಳೋಣ.

ಶ್ರೀ ಪಿ. ರಾಂದೇವ್.—ನಾನೂ ಸಹ ರೂಲ್ ೩೩ಳಿರ ಕೆಳಗೆ ಅಗತ್ಯ ವಸ್ತುಗಳ ಬಗ್ಗೆ ಒಂದು ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೆ.

ಅಧ್ಯಕ್ಷರು.—ನಂತರ ತೆಗೆದುಕೊಳ್ಳೋಣ.

ಗಮನ ಸೆಳೆಯುವ ಸೂಚನೆ

(i) ಹಿರಿಯೂರಂ ತಾಲ್ಲೂಕಿನಲ್ಲಿ ಮತ್ತು ಹಿರಿಯೂರು ನಗರದಲ್ಲಿ ಉಂಟಾಗಿರುವ ಸೀಮೆಎಣ್ಣೆ ತೊಂದರೆಯ ಬಗ್ಗೆ

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ, ನಾನು ತಮ್ಮ ಅಪ್ಪಣೆ ಪಡೆದು ಹಿರಿಯೂರು ತಾಲ್ಲೂಕು ಹಾಗೂ ಹಿರಿಯೂರು ನಗರದಲ್ಲಿ ಉಂಟಾಗಿರುವ ಸೀಮೆ ಎಣ್ಣೆ ತೊಂದರೆಯ ಬಗ್ಗೆ ಮಾನ್ಯ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಯವರು).—ಅಧ್ಯಕ್ಷರೇ, ಹಿರಿಯೂರು ತಾಲ್ಲೂಕಿನಲ್ಲಿ ಹಾಗೂ ನಗರದಲ್ಲಿ ಸೀಮೆ ಎಣ್ಣೆ ಅಭಾವ ಇರುವುದಿಲ್ಲ. ಹಿರಿಯೂರು ತಾಲ್ಲೂಕಿಗೆ ಸಿದ್ದರಾಮಣ್ಣ ಎಂಬ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಡೀಲರ್ ಮುಂಖಾಂತರ ಪ್ರತೀ ತಿಂಗಳು ೬೩ ಕೆ.ಎಲ್. ಸೀಮೆ ಎಣ್ಣೆಯನ್ನು ಮತ್ತು ಚಿತ್ರದುರ್ಗದ ವಿ.ಬಿ. ಶೆಟ್ಟರು ಬಿ.ಪಿ.ಸಿ. ಡೀಲರ್‌ರವರ ಮುಖಾಂತರ ೩೬ ಕಿಲೋ. ಲೀಟರ್ ಸೀಮೆ ಎಣ್ಣೆಯನ್ನು ಸರಬರಾಜು ಮಾಡಲಾಗುತ್ತಿದೆ. ಅಂದರೆ ತಿಂಗಳಿಗೆ ೯೯ ಕಿಲೋ ಲೀಟರ್ ಸೀಮೆ ಎಣ್ಣೆಯನ್ನು ವಿತರಣೆ ಮಾಡಲಾಗುತ್ತಿದೆ. ತಿಂಗಳುವಾರು ವಿತರಣೆ ಮಾಡಿದ ವಿವರವು ಈ ರೀತಿ ಇರುತ್ತದೆ.

ಜುಲೈ ಅಸಿರಲ್ಲಿ ೮೧ ಕಿಲೋ ಲೀಟರ್
ಆಗಸ್ಟ್ ಅಸಿರಲ್ಲಿ ೯೯ ಕಿಲೋ ಲೀಟರ್
ಸೆಪ್ಟೆಂಬರ್ ಅಸಿರಲ್ಲಿ ೯೯ ಕಿಲೋ ಲೀಟರ್ಸ್
ಅಕ್ಟೋಬರ್ ಅಸಿರಲ್ಲಿ ೯೯ ಕಿಲೋ ಲೀಟರ್ಸ್
ನವೆಂಬರ್ ಅಸಿರಲ್ಲಿ ೯೯ ಕಿಲೋ ಲೀಟರ್ಸ್
ಡಿಸೆಂಬರ್ ಅಸಿರಲ್ಲಿ ೮೭ ಕಿಲೋ ಲೀಟರ್ಸ್

ಜನವರಿ ೮ಳರ ತಿಂಗಳಿಗೆ ೨೦ ಕಿಲೋ ಲೀಟರ್ಸ್ ಹೆಚ್ಚುವರಿ ಸೀಮೆ ಎಣ್ಣೆಯನ್ನು ಸಹ ಬಿಡುಗಡೆ ಮಾಡಲಾಗಿರುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್.—ಸ್ವಾಮಿ, ನನಗೆ ಕಿಲೋ ಲೀಟರ್ಸ್ ಅಂದರೆ ಗೊತ್ತಾಗಲಿಲ್ಲ.

ಶ್ರೀ ಜಿ. ಬಸವಣ್ಣಪ್ಪ.—ಒಂದು ಕಿಲೋ ಲೀಟರ್ಸ್‌ಗೆ ೧,೦೦೦ ಲೀಟರ್‌ಗಳು.

ಶ್ರೀ ಕೆ. ಹೆಚ್. ರಂಗನಾಥ್.—ನನಗೊಂದು ರಿಜಿಸ್ಟರ್ ಕಾಗದ ಬಂದಿದೆ. ನಿನ್ನೆ ಮೊನ್ನೆ ಕೂಡ ನಾನು ನನ್ನ ಕ್ಷೇತ್ರದಲ್ಲಿದ್ದೆ. ಫುಡ್ ಅಸಿಸ್ಟೆಂಟ್ ಕೂಡ ಸಿಕ್ಕಿದ್ದರು, ಅವರು ಆಲ್ಲಿಗೆ ಬಂದು ಎಂಟು ದಿವಸವಾಗಿ, ಎಂಟು ದಿವಸದ ಹಿಂದೆ ಚಾರ್ಜು ತೆಗೆದುಕೊಂಡಿದ್ದಾರೆ. ಜನಗಳು ಸೀಮೆಎಣ್ಣೆ ಇಲ್ಲವೆಂದು ತಲೆ ಕೆಟ್ಟು ಹೇಳುತ್ತಾರೆಯೇ ? ಹಿರಿಯೂರು ತಾಲ್ಲೂಕು ಹಾಗೂ ಹಿರಿಯೂರು ನಗರಕ್ಕೆ ಎಷ್ಟು ಪ್ರಮಾಣದಲ್ಲಿ ಸೀಮೆಎಣ್ಣೆ ಬೇಕೆನ್ನುವ ಬಗ್ಗೆ ಅಧ್ಯಯನ ಮಾಡಲಾಗಿದೆಯೆ ? ಒಬೊಬ್ಬರಿಗೆ ಎಷ್ಟೆಷ್ಟು ಸೀಮೆಎಣ್ಣೆ ಬೇಕಾಗುತ್ತದೆ? ಅಲ್ಲಿ ಒಬ್ಬರು ಮಾತ್ರ ಶೆಟ್ಟರ್ ಎನ್ನುವವರು ಇದ್ದಾರೆ. ಅವರಿಗೆ ಸುಮಾರು ಮುನ್ನೂರು ಮೂವತ್ತು ಸಾವಿರ ಲೀಟರ್ ಸೀಮೆ ಎಣ್ಣೆ ಬರುತ್ತದೆಂದು ಕೇಳಿದ್ದೇನೆ. ಅವರು ಒಬ್ಬರೇ ಡೀಲರ್ ಅವರು ಕೂಡ ಲಿಟರ್ ಪ್ರಕಾರ ಮಾರುವುದಿಲ್ಲ. ಒಂದು ಹಳೇ ಕಾಲದ ಸೀಸೆ ಇಟ್ಟುಕೊಂಡು ೨.೯೦ ಪೈಸೆಗೆ ಮಾರಾಟ ಮಾಡುತ್ತಾರೆ. ಅದು ಸಾಧಾರಣವಾಗಿ ೭೫೦ ಎಂ.ಎಂ. ಇರುತ್ತೆ. ೨೦೦ ಚಿಲ್ಲರೆ ಎಂ.ಎಂ. ಎಣ್ಣೆ ಕಡಿಮೆಯಾಗುತ್ತದೆ. ಹಳ್ಳಿಗಳಲ್ಲಿ ಸೀಮೆ ಎಣ್ಣೆ ವಿತರಣೆ ವ್ಯವಸ್ಥೆ ಇಲ್ಲವೇ ಇಲ್ಲ. ಸಹಕಾರ ಸಂಘಗಳು ಕೂಡ ವಿತರಣೆ ಮಾಡುತ್ತಿಲ್ಲ, ಕ್ಯಾಷ್ ಕ್ರೆಡಿಟ್ ಸಾಲವನ್ನು ತೆಗೆದುಕೊಳ್ಳುವುದಕ್ಕೆ ಡಿ.ಸಿ.ಸಿ. ಬ್ಯಾಂಕುಗಳಲ್ಲಿ ಹಣ ಇಲ್ಲ. ಇವತ್ತು ಅಲ್ಲಿ ಕೆಲವರು ಸತ್ಯಾಗ್ರಹ ಮಾಡುತ್ತಿದ್ದಾರೆ. ಹಾಕರ್ಸ್ ಹಿರಿಯೂರು ಟೌನ್‌ಗೆ ಒಂದು ಮೈಲಿ ದೂರದಲ್ಲಿ ಒಂದು ಹಳ್ಳಿಯಲ್ಲಿದ್ದಾರೆ. ಮಾನ್ಯ ಮಂತ್ರಿಯವರು ಕೊಟ್ಟಿರತಕ್ಕ ಹೇಳಿಕೆ ಸತ್ಯಕ್ಕೆ ದೂರವಾದುದು. ಇವತ್ತು ರೈತರು ಮತ್ತು ರೈತ ಕಾರ್ಮಿಕರು ಶೋಷಣೆಗೆ ಒಳಗಾಗಿದ್ದಾರೆ. ಲೀಟರ್ ಪ್ರಕಾರ ಸೀಮೆಎಣ್ಣೆ ಎಲ್ಲೂ ಕೂಡ ಕೊಡುತ್ತಿಲ್ಲ.

ಶ್ರೀ ಜಿ. ಬಸವಣ್ಣಪ್ಪ.—ಶಾಸ್ತ್ರೀಯವಾಗಿ ವಿತರಣೆ ಮಾಡಬೇಕಾದರೆ, ಒಬ್ಬರಿಗೆ ೧೬ ಲೀಟರ್ ಎಣ್ಣೆ ಕೊಡಬೇಕಾಗುತ್ತದೆ. ಅದರ ಪ್ರಕಾರ ೬೦,೦೦೦ ಕಿಲೋ ಲೀಟರ್ ಎಣ್ಣೆ ಬೇಕಾಗುತ್ತದೆ.

ಶ್ರೀ ಕೆ.ಹೆಚ್. ರಂಗನಾಥ್.—ವಿದ್ಯುಚ್ಛಕ್ತಿ ಬಳಸುವಂಥ ಮನೆಗಳನ್ನು ಲೆಕ್ಕ ಹಾಕಿರುತ್ತೀರಿ ?

ಶ್ರೀ ಜಿ. ಬಸವಣ್ಣಪ್ಪ.—ಪಡಿತರ ಕಾರ್ಡುಗಳ ಮೇಲೆ ಲೆಕ್ಕ ಹಾಕಲಾಗುವುದು. ಬೆಂಗಳೂರು ನಗರದಲ್ಲಿ ಕಾರ್ಡುಗಳ ಮೇಲೆ ಅಧ್ಯಯನ ಮಾಡಲಾಗಿದೆ. ಅದರಂತೆ ಸೀಮೆ ಎಣ್ಣೆ ಕೊಡ ಬೇಕಾಗಿದೆ.....

ಶ್ರೀ ಕೆ.ಹೆಚ್. ರಂಗನಾಥ್.—ಸ್ವಾಮಿ, ನಾನು ಕೇಳಿದ್ದು ಹಿರಿಯೂರು ತಾಲ್ಲೂಕು ಮತ್ತು ಹಿರಿಯೂರು ನಗರದ್ದು.

ಶ್ರೀ ಜಿ. ಬಸವಣ್ಣಪ್ಪ.—ನನಗೆ ಹೇಳುವುದಕ್ಕೆ ಅವಕಾಶ ಕೊಡಿ ಆ ಹಿಂದು ಸ್ಕೇಲ್‌ನಲ್ಲಿ ಕೂಡ ಬೇಕಾದರೆ, ಸುಮಾರು ೬೦–೭೦ ಸಾವಿರ ಕಿಲೋ ಲಿಟರ್ಸ್ ಕೊಡಬೇಕಾಗುತ್ತದೆ. ಈಗ ೨೬,೯೦೦ ಮಾತ್ರ ಕೊಡಲಾಗುತ್ತಿದೆ. ಮೊದಲು ೨೫,೩೮೦ ಕೊಡಲಾಗುತ್ತಿತ್ತು. ಗ್ರಾಮಾಂತರ ಪ್ರದೇಶಗಳಲ್ಲಿ ೪–೫ ಲೀಟರ್ ಕೊಡಲಾಗುತ್ತಿದೆ. ಲೋಪಗಳು ಇದ್ದರೆ ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈ ತಿಂಗಳು ಸುಮಾರು ೨೦.೮೦೦ ಕಿಲೋಲೀಟರ್ಸ್ ಜಾಸ್ತಿ ಕೊಡಲಾಗಿದೆ.

ಶ್ರೀ ಕೆ.ಹೆಚ್. ರಂಗನಾಥ್.—ನಾನು ನಿನ್ನೆ ರಾತ್ರಿ ಬಂದಿದ್ದೇನೆ. ದಾವಣಗೆರೆಯಲ್ಲಿ ಫುಡ್ ಅಸಿಸ್ಟೆಂಟ್‌ರವರು ಕೂಡ ಸಿಕ್ಕಿದ್ದರು.

ಶ್ರೀ ಜಿ. ಬಸವಣ್ಣಪ್ಪ.—ಈಗ ೨೦,೦೦೦ ಕಿಲೋಲೀಟರ್ ಜಾಸ್ತಿ ಕೊಡಲಾಗಿದೆ. ಜಿಲ್ಲಾಧಿಕಾರಿಯವರಿಗೆ ವಿಷಯ ತಿಳಿಸಿ ಸೂಕ್ತ ರೀತಿಯಲ್ಲಿ ವಿತರಣೆ ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

LEGISLATIVE BUSINESS

Karnataka State Universities(Amendment) Bill 1984

Leave to introduce

SRI. B. RACHAIAH (Minister For Education).—ಮಾನ್ಯ ಅಧ್ಯಕ್ಷರೇ, ಸಭೆಯ ಮುಂದೆ ಕರ್ನಾಟಕ ವಿಶ್ವವಿದ್ಯಾನಿಲಯದ (ತಿದ್ದುಪಡಿ) ಮಸೂದೆ ೧೯೮೪ನ್ನು ಇಡಲಿಕ್ಕೆ ತಮ್ಮ ಅಪ್ಪಣೆ ಕೇಳುತ್ತೇನೆ.